ECA No. 01/2021
ಪಿ.ಡಬ್ಲು- 1

ದಿನಾಂಕಃ 24-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ** ಅರ್ಜಿದಾರರ ಪರ ಶ್ರೀ ಎಮ್ ಬಿ ಎನ್ ವಕೀಲರಿಂದ.

ಜಿಲ್ಲಾ ಆಸ್ಪತ್ರೆ ಹಾವೇರಿ ಇವರು ನೀಡಿದ ಡಿಸ್‌ಚಾರ್ಜ ಕಾರ್ಡ ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-30 ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ನಿಶಾನೆ ಅಂತಾ ಗುರುತಿಸಲು ಎದುರುದಾರರ ನಂ.2 ಪರ ವಕೀಲರು ತಮ್ಮ ಆಕ್ಷೇಪಣೆ ವ್ಯಕ್ತಪಡಿಸಿದ್ದು, ಅವರ ತಕರಾರಿಗೆ ಒಳಪಟ್ಟು ರುಜುವಾತಿನ ಭಾರದೊಂದಿಗೆ ನಿಶಾನೆ ಅಂತಾ ಗುರುತಿಸಲಾಯಿತು.

ಆದ್ದರಿಂದ ನಾನು ಕೋರಲಾದಂತೆ ಅರ್ಜಿಯನ್ನು ಖರ್ಚು ಸಹಿತ ಮಂಜೂರು ಮಾಡಲು ಪ್ರಾರ್ಥಿಸುತ್ತೇನೆ.

ಪಾಟೀಸವಾಲುಃ- ಎದುರುದಾರರ ನಂ.2 ಪರ ಶ್ರೀ. ಎನ್ ಡಿ ವಕೀಲರಿಂದ

ನಿಪಿ-30 ರಲ್ಲಿ ವೈದ್ಯರ ಹೆಸರು ನಮೂದು ಇಲ್ಲ ಎಂದರೆ ಸರಿ. ಸಾಕ್ಷಿ ಹುಣಶಾಳ ವೈದ್ಯರು ಚಿಕಿತ್ಸೆ ನೀಡಿರುವುದಾಗಿ ನುಡಿಯುತ್ತಾರೆ. ಹಾಗೇ 15 ದಿವಸಗಳವರೆಗೆ ಚಿಕಿತ್ಸೆ ಪಡೆದುಕೊಂಡಿರುವುದಾಗಿ ಹೇಳುತ್ತಿದ್ದು ನಿಪಿ-30 ರಲ್ಲಿ ಪ್ರತಿದಿನದ ಪರೀಕ್ಷೆಯ ವರದಿ ಬರೆಯಲಾಗಿಲ್ಲ ಎಂದರೆ ಸರಿ. ನಿಪಿ-30 ನ್ನು ನಾನೇ ಸೃಷ್ಠಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಹಾಕಿದ ರಾಡ್‌ನ್ನು ತೆಗೆದ ಬಗ್ಗೆ ನಿಪಿ-30 ರಲ್ಲಿ ನಮೂದಿಸಿಲಾಗಿಲ್ಲ ಎಂದರೆ ಸರಿ. ನಾನು ನಿಪಿ-30 ನ್ನು ಖೊಟ್ಟಿಯಾಗಿ ತಯಾರಿಸಿ ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).